# ಹಿರಿಯ ಸಿವಿಲ್ ಜಡ್ಜ್ ಮತ್ತು ಸಿ.ಜೆ.ಎಂ. ನ್ಯಾಯಾಲಯ, ಚಾಮರಾಜನಗರ

## ಸಿ.ಸಿಃ 218/2023

ಪ್ರಾಸಾ-1, ಚಾಸಾ-2

| | | |
|---|---|---|
| ಸಾಕ್ಷಿದಾರರ ಹೆಸರು | : | ಚಂದ್ರಶೇಖರ್ |
| ತಂದೆಯ ಹೆಸರು | : | ಲೇಟ್ ಮುದ್ದಶೆಟ್ಟಿ |
| ವಯಸ್ಸು | : | 62ವರ್ಷ |
| ಉದ್ಯೋಗ | : | ಟೈಲರಿಂಗ್ ಕೆಲಸ |
| ವಾಸ | : | ರಾಮಸಮುದ್ರ |

ಸಾಕ್ಷಿಗೆ ದಿನಾಂಕಃ 27.06.2025ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ಆರೋಪಿ ನನಗೆ ಗೊತ್ತು. ನಾನು, ನನ್ನ ಮಗ, ಚಾಸಾ-1 ರಾಘವೇಂದ್ರ ದಿಃ 03.11.2022ರಂದು ನಾನು, ಚಾಸಾ-1ರವರು ಮೈಸೂರಿಗೆ ಕೆಲಸದ ನಿಮಿತ್ತ ಹೋಗಿದ್ದು, 04.11.2022 ರಂದು ಮೈಸೂರಿನಲ್ಲಿ ಶಿವಮೊಗ್ಗ ಮತ್ತು ಕೊಯಮತ್ತೂರು ಕೆ.ಎಸ್.ಆರ್.ಟಿ.ಸಿ. ಬಸ್ ನ್ನು ಮೈಸೂರಿನಲ್ಲಿ ಹತ್ತಿಕೊಂಡು ಚಾಮರಾಜನಗರಕ್ಕೆ ಬರುತ್ತಿದ್ದಾಗ, ಬೆಳಗಿನ ಜಾವ 1 ಗಂಟೆ10ನಿಮಿಷದಲ್ಲಿ ಕಾಳನಹುಂಡಿ ಕ್ರಾಸ್ ಬ್ರಿಡ್ಜ್ ಹತ್ತಿರ ಬಸ್ ಚಾಲಕನು ಅತಿವೇಗ ಮತ್ತು ಅಜಾಗರೂಕತೆಯಿಂದ ಬಸ್ ಅನ್ನು ಚಾಲನೆ ಮಾಡಿ ನಿಯಂತ್ರಿಸಲಾಗಿದೆ ಕಲ್ಲಿಗೆ ಡಿಕ್ಕಿ ಮಾಡಿದ್ದು, ಹಳ್ಳಕ್ಕೆ ಮುಗುಚಿಕೊಂಡಿತು. ನನಗೆ ಎದೆಯ ಪೆಕ್ಕೆಲುಬು ಮುರಿದು ಹೋಗಿದ್ದು, ಚಾಸಾ-1ರವರಿಗೆ ಸಣ್ಣಪುಟ್ಟ ಒಳನೋವಾಗಿದ್ದು, ಬಸ್ಸಿನಲ್ಲಿದ್ದ ಕೆಲವು ಪ್ರಯಾಣಿಕರು ಬಸ್ ಚಾಲಕ ಹಾಗೂ ನಿರ್ವಾಹಕನಿಗೂ ಸಣ್ಣಪುಟ್ಟ ಗಾಯಗಳಾಗಿರುತ್ತವೆ.ಚಾಸಾ-1ರವರನ್ನು ಆಟೋದಲ್ಲಿ ಚಾಮರಾಜನಗರ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದು, ನನ್ನನ್ನೂ ಹಾಗೂ ಉಳಿದ ಪ್ರಯಾಣಿಕರನ್ನು ಆ್ಯಂಬುಲೆನ್ಸ್ ನಲ್ಲಿ ಚಿಕಿತ್ಸೆ ಗಾಗಿ ಜಿಲ್ಲಾ ಆಸ್ಪತ್ರೆ ಗೆ ಕರೆದುಕೊಂಡು ಬಂದಿರುತ್ತಾರೆ. ನಂತರ ಹೆಚ್ಚಿನ ಚಿಕಿತ್ಸೆಗಾಗಿ ಚಾಸಾ-1ರವರನ್ನು ಮೈಸೂರಿನ ಗೋಪಲಾರವರ ಆಸ್ಪತ್ರೆ ಗೆ ಒಳರೋ

ದಾಖಲಿಸಿರುತ್ತೇನೆ. ಸದರಿ ಅಪಘಾತವು ನ್ಯಾಯಾಲಯದ ಮುಂದೆ ಇರುವ ಆರೋಪಿಯ ತಪ್ಪಿನಿಂದ ಆಗಿರುತ್ತದೆ. ಅಪಘಾತದ ಬಗ್ಗೆ ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ. ಸಾಕ್ಷಿಯು ಅಪಘಾತಪಡಿಸಿದ ಕೆ.ಎಸ್.ಆರ್.ಟಿ.ಸಿ. ಬಸ್ ಅನ್ನು ಮೂರು ಚಾಯಾ ಚಿತ್ರಗಳನ್ನು ನೋಡುತ್ತಿದ್ದು, ಅವುಗಳನ್ನು ನಿಪಿ-1 ರಿಂದ 3 ಎಂದು ಗುರುತಿಸಲಾಯಿತು. ಸಿ.ಡಿ.ಯನ್ನು ನಿಪಿ-4 ಎಂದು ಗುರುತಿಸಲಾಯಿತು.

**ಪಾಟೀಸವಾಲುಃ ಶ್ರೀ ಎಂ.ಎಂ ವಕೀಲರಿಂದಃ**

ಮೈಸೂರಿನಲ್ಲಿ 12 ಗಂಟೆ ಬಸ್ಸ್ ಅನ್ನು ಹತ್ತಿರುತ್ತೇನೆ. ಬಸ್ ಹತ್ತಿದಾಗ ಬಸ್ ಸಂಖ್ಯೆ ನೋಡಿಲ್ಲ. ಬಸ್ಸಿನಲ್ಲಿರುವ ಜನ ಗೊತ್ತಿಲ್ಲ. ಚಾಸಾ-4 ರಿಂದ 12 ಯಾರು ಅಂತ ನನಗೆ ಗೊತ್ತಿಲ್ಲ. ಬಸ್ಸಿನ ಹಿಂಭಾಗದಲ್ಲಿ ಕುಳಿತುಕೊಂಡಿದ್ದೆ ಸೀಟಿನ ನಂಬರ್ ಗೊತ್ತಿಲ್ಲ. ಅಪಘಾತ ವಾಗದ ಸುಮಾರು 1 ಗಂಟೆ ಆಗಿತ್ತು. ಅಪಘಾತವಾದಗ ನಿದ್ದೆ ಮಾಡುತ್ತಿದ್ದೆ ನನಗೆ ಏನು ಗೊತ್ತಿಲ್ಲ ಎಂದರೆ ಸರಿ. ಚಾಲಕನ ತಪ್ಪಿನಿಂದ ಅಪಘಾತವಾಗಿದೆ ಎಂದರೆ ಸರಿ. ಅಪಘಾತವನ್ನು ನಾನು ನೋಡಿಲ್ಲ. ಪರಿಹಾರ ಹಣ ಪಡೆಯಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಸಿ.ಜೆ.ಎಂ., ಚಾಮರಾಜನಗರ.

# ಹಿರಿಯ ಸಿವಿಲ್ ಜಡ್ಜ್ ಮತ್ತು ಸಿ.ಜೆ.ಎಂ. ನ್ಯಾಯಾಲಯ, ಚಾಮರಾಜನಗರ

## ಸಿ.ಸಿಃ 218/2023

ಪ್ರಾಸಾ-2, ಚಾಸಾ-3

| | | |
|---|---|---|
| ಸಾಕ್ಷಿದಾರರ ಹೆಸರು | : | ವಸಂತ್ ಕುಮಾರ್ |
| ತಂದೆಯ ಹೆಸರು | : | ರಾಮಚಂದ್ರ ನಾಯಕ |
| ವಯಸ್ಸು | : | 61 ವರ್ಷ |
| ಉದ್ಯೋಗ | : | ನಿವೃತ್ತ ಚಾಲಕ |
| ವಾಸ | : | ಶಿವಮೊಗ್ಗ |

ಸಾಕ್ಷಿಗೆ ದಿನಾಂಕಃ 27.06.2025ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ಆರೋಪಿ ಗೊತ್ತು . ನಾನು ಮತ್ತು ಆರೋಪಿ ಶಿವಮೊಗ್ಗ ಡಿಪೋದಲ್ಲಿ ಚಾಲಕ, ಚಾಲಕ ಕಮ್ ನಿರ್ವಾಹಕನಾಗಿ ಕೆಲಸ ಮಾಡುತ್ತಿದ್ದೇನೆ. ದಿಃ 04.11.2022ರಂದು ಶಿವಮೊಗ್ಗ ಡಿಪೋದಿಂದ ಮೈಸೂರಿಗೆ ಬಂದು ಮೈಸೂರಿನಿಂದ ಬೆಳಗಿನ ಜಾವ 1 ಗಂಟೆ ಸಮಯದಲ್ಲಿ ಚಾಮರಾಜನಗರಕ್ಕೆ ಬರುತ್ತಿದ್ದಾಗ, ಕಾಳನಹುಂಡಿ ಕ್ರಾಸ್ ಹತ್ತಿರ ಬಸ್ ಪಲ್ಟಿಯಾಗಿದ್ದು, ನಾನು ಬಸ್ಸಿನಲ್ಲಿ ನಿದ್ರೆ ಮಾಡುತ್ತಿದ್ದು, ಶಬ್ದ ಕೇಳಿ ಎಚ್ಚರಗೊಂಡಾಗ ಬಸ್ ಪಲ್ಟಿ ಆಗಿದ್ದು ನನಗೂ ಹಾಗೂ ಕೆಲವು ಪ್ರಯಾಣಿಕರಿಗೂ ಪೆಟ್ಟಾಗಿದ್ದು ನಮ್ಮನ್ನೂ ಚಾಮರಾಜನಗರ ಸಾರ್ವಜನಿಕ ಆಸ್ಪತ್ರೆಗೆ ಕರೆದುಕೊಂಡು ಬಂದು ಅಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ಅಪಘಾತವನ್ನು ನಾನು ಕಣ್ಣಾರೆ ನೋಡಿಲ್ಲ. ಯಾರ ತಪ್ಪಿನಿಂದ ಅಪಘಾತವಾಯಿತು ಎಂದು ನನಗೆ ಗೊತ್ತಿಲ್ಲ. ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ.

(ಮಾನ್ಯ ಎಪಿಪಿರವರರ ಕೋರಿಕೆ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ನೀಡಲಾಯಿತು)

**<u>ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ</u>**

ದಿನಾಂಕಃ 10.11.2022ರಂದು ಆರೋಪಿಯು ಕೆ.ಎಸ್.ಆರ್.ಟಿ.ಸಿ. ಬಸ್‌ನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಕಾಳನಹುಂಡಿ ಸೇತುವೆಗೆ ಡಿಕ್ಕಿ ಪಡಿಸಿದ್ದರ ಪರಿಣಾಮ ಬಸ್ ಪಲ್ಟಿ ಆಗಿ ನನಗೆ ಹಾಗೂ ಕೆಲವು ಪ್ರಯಾಣಿಕರಿಗೆ ಗಾಯಗಳಾಗಿರುವ ಬಗ್ಗೆ ಪೋಲಿಸರಿಗೆ ನೀಡಿದ ಹೇಳಿಕೆಯನ್ನು ಸಾಕ್ಷಿಗೆ ಓದಿ ಹೇಳಲಾಗಿ ಸಾಕ್ಷಿಯು ಒಪ್ಪಿಕೊಳ್ಳದ ಹೇಳಿಕೆಯನ್ನು ನಿಪಿ-5 ಎಂದು ಗುರುತಿಸಲಾಯಿತು. ನಿಪಿ-5 ರಲ್ಲಿ ಏನು ಬರೆದಿದೆ ಗೊತ್ತಿಲ್ಲ. ಆರೋಪಿ ನನ್ನ ಸಹೋದ್ಯೋಗಿ ಎಂಬ ಕಾರಣಕ್ಕಾಗಿ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀಸವಾಲುಃ</u>**

ಆರೋಪಿ ಪರ ವಕೀಲರು ಪಾಟೀಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

**<u>ಮರು ವಿಚಾರಣೆಃ</u>** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಸಿ.ಜೆ.ಎಂ., ಚಾಮರಾಜನಗರ.